**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂಃ 15**

**ಸಿ ಡಬ್ಲ್ಯೂಃ 23**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೈತ್ರಾ ಅವರಾದಿ |
| ತಂದೆಯ ಹೆಸರು | : | ಅಡಿವೆಪ್ಪ ಅವರಾದಿ |
| ವಯಸ್ಸು | : | 30 ವರ್ಷಗಳು |
| ಉದ್ಯೋಗ | : | ಮಹಿಳಾ ಕಾನಸ್ಟೇಬಲ 3238,<br>ಧಾರವಾಡ ಶಹರ ಪೋಲಿಸಠಾಣೆ |
| ವಾಸಸ್ಥಳ | : | ಧಾರವಾಡ |

ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ ಐದು ವರ್ಷಗಳಿಂದ ಧಾರವಾಡ ಶಹರ ಪೋಲಿಸ ಠಾಣೆಯಲ್ಲಿ ಮಹಿಳಾ ಪೋಲಿಸ ಕಾನಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಧಾರವಾಡ ಶಹರ ಪೋಲಿಸಠಾಣೆ ಗುನ್ನಾ ನಂ. 27/2022 ಕಲಂ 452, 323, 324, 307, 504, 506 ಐಪಿಸಿಯ ಪ್ರಕರಣದಲ್ಲಿ ಘಟನಾ ಸ್ಥಳದ ಪಂಚನಾಮೆ ಕಾಲಕ್ಕೆ , ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ಮತ್ತು

ಆರೋಪಿತನು ಹಾಜರುಪಡಿಸಿದ ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿ ಚಾಸಾ.24 ರವರ ಆದೇಶದ ಪ್ರಕಾರ ತನಿಖಾ ಸಹಾಯಕಳಾಗಿ ಮತ್ತು ಫೊಟೋಗ್ರಾಪರ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ

ತನಿಖಾ ಕಾಲಕ್ಕೆ ನಮ್ಮ ಠಾಣೆಗೆ ಕೊಡಲಾದ ಡಿಜಿಟಲ್ ಕ್ಯಾಮರಾದ ಮುಖಾಂತರ ಮೇಲೆ ಹೇಳಿದ ಪೋಟೋಗಳನ್ನು ತೆಗೆದು ಮೆಮೋರಿ ಕಾರ್ಡನಿಂದ ಕಂಪ್ಯೂಟರಗೆ ಡೌನಲೋಡ ಮಾಡಿ ಅದನ್ನು ಸಿಡಿಯಲ್ಲಿ ವರ್ಗಾಯಿಸಿ, ಕೆನಾನ ಪ್ರಿಂಟರನಿಂದ ಪೋಟೋಗಳನ್ನು ಪ್ರಿಂಟ ಮಾಡಿ ತನಿಖಾಧಿಕಾರಿಗಳಿಗೆ ಕೊಟ್ಟಿದ್ದೇನೆ.

ಸದರಿ ಪೋಟೋಗಳನ್ನು ಯಾವುದೇ ಎಡಿಟ ಮಾಡದೇ ಸಿಡಿಗೆ ವರ್ಗಾವಣೆ ಮಾಡಿ ಸಿಡಿಯನ್ನು ಸಹ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ ಎಂದು ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಕಾರ ಪ್ರಮಾಣ ಪತ್ರ ಕೊಟ್ಟಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದು ಸದರಿ ಪ್ರಮಾಣ ಪತ್ರವನ್ನು ನಿಶಾನೆ ಪಿ–19 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–19(ಎ) ಎಂದು ಗುರುತಿಸಲಾಯಿತು. ನಾನು ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ನಿಶಾನೆ ಪಿ–3, 4, 6, 7, 9 ಮತ್ತು 10 ಪೋಟೋಗಳನ್ನು ಈಗ ನನಗೆ ತೋರಿಸಿದ್ದು ಅದನ್ನು ನಾನೇ ತೆಗೆದಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ  ವಕೀಲರಾದ ಶ್ರೀ ಸಿಎಂ (ಎಲಎಡಿಸಿ) ರವರಿಂದ</u>**

ನನಗೆ ತನಿಖಾಧಿಕಾರಿಯ ಸಹಾಯಕಳಾಗಿ ಕೇಸಿನಲ್ಲಿ ಪೋಟೋ ತೆಗೆಯಲು ತನಿಖಾಧಿಕಾರಿಯು ಮೌಖಿಕವಾಗಿ ಆದೇಶ ಮಾಡಿದ್ದಾರೆ. ಮೌಖಿಕವಾಗಿ ಆದೇಶ ಮಾಡಿದ್ದಾರೆ ಎಂದು ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಮ್ಮ ಠಾಣೆಯ ಡಿಜಿಟಲ್ ಕ್ಯಾಮರಾದಲ್ಲಿ ಪೊಟೋ ತೆಗೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಡಿಯಲ್ಲಿ ಡೌನಲೋಡ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಯಾವುದೇ ಸಿಡಿ ಮಾಡಿಲ್ಲ ಪೋಟೋ ತೆಗೆದಿಲ್ಲ ಆದರೂ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸರ್ಟಿಪಿಕೇಟನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.